(ರೂ. ಲಕ್ಷಗಳಲ್ಲಿ)

ವರ್ಷ	ಸಂಸ್ಥೆಗಳ ಸಂಖ್ಯೆ	ಬಿಡುಗಡೆ ಅನುದಾನ
2006–07	–	–
2007–08	3	15.00
2008–09	7	120.00

2009–10ರಲ್ಲಿ ಅನುಚ್ಛೇದ 275 ರಡಿ ಬಿಡುಗಡೆ ಮಾಡಲಾದ ಅನುದಾನ

942 (1428) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಭಾರತ ಸಂವಿಧಾನದ ಅನುಚ್ಛೇದ 275ರ ಅಡಿಯಲ್ಲಿ ಪರಿಶಿಷ್ಟ ವರ್ಗದವರ ಮೂಲಭೂತ ಸೌಕರ್ಯ ಕಲ್ಪಿಸಲು ಚಿತ್ರದುರ್ಗ ಜಿಲ್ಲೆಯ ಯಾವ ವಿಧಾನ ಸಭಾ ಕ್ಷೇತ್ರಗಳಿಗೆ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು; ಕ್ಷೇತ್ರವಾರು ವಿವರ ನೀಡುವುದು;

ಆ) ಈ ಅನುದಾನ ಬಿಡುಗಡೆಯಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರಕ್ಕೆ ಅನುದಾನದ ಬಿಡುಗಡೆಯಲ್ಲಿ ಆಗಿರುವ ತಾರತಮ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ವರ್ಷದಲ್ಲಿಯೂ ಈ ರೀತಿ ತಾರತಮ್ಯವನ್ನು ಸರ್ಕಾರದ ಗಮನಕ್ಕೆ ತಂದಾಗ, ಸರಿಪಡಿಸುವುದಾಗಿ ಭರವಸೆ ನೀಡಿದ್ದರೂ ಪುನಃ ತಾರತಮ್ಯವನ್ನು ಮುಂದುವರಿಸಲು ಕಾರಣವೇನು;

ಈ) ಪರಿಶಿಷ್ಟ ವರ್ಗದವರ ಮೂಲಭೂತ ಸೌಕರ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನವು ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾದ ಚಳ್ಳಕೆರೆ ಮಂಜೂರು ಮಾಡದಿರಲು ಕಾರಣಗಳೇನು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಭಾರತ ಸಂವಿಧಾನ ಅನುಚ್ಛೇಧ 275(1)ರ ಮೇರೆಗೆ ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸುವ ಸಲುವಾಗಿ ಅನುದಾನವನ್ನು ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿರುವುದಿಲ್ಲ. ಆದರೆ, ತಾಲ್ಲೂಕುವಾರು ಹಂಚಿಕೆ ಮಾಡಲಾಗಿರುತ್ತದೆ. 2009–10ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಭಾರತ ಸಂವಿಧಾನ

ಅನುಚ್ಛೇಧ 275(ರಡಿ) ಹಾಗೂ ಗಿರಿಜನ ಉಪಯೋಜನೆ ಯಡಿ ಕ್ರೋಡೀಕರಿಸಿದ ಅನುದಾನ ಇವುಗಳ ಅಡಿ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ತಾಲ್ಲೂಕು	ಭಾರತ ಸಂವಿಧಾನ ಅನುಚ್ಛೇಧ 275(1)	ಕ್ರೋಡೀಕರಿಸಿದ ಅನುದಾನ	ಒಟ್ಟು
1	ಹೊಸದುರ್ಗ	20.00	7.50	27.50
2	ಮೊಳಕಾಲ್ಮೂರು	30.00	18.00	48.00
3	ಹೊಳಲ್ಕೆರೆ	22.00	10.00	32.00
4	ಹಿರಿಯೂರು	75.00	11.00	86.00
5	ಚಿತ್ರದುರ್ಗ	15.00	25.00	40.00
6	ಚಳ್ಳಕೆರೆ	32.00	46.00	78.00
	ಒಟ್ಟು	**194.00**	**117.50**	**311.50**

ಆ) ಇಲ್ಲ.

ಇ) ಈಗ ಅಂತಹ ಯಾವುದೇ ತಾರತಮ್ಯ ಮಾಡಿರುವುದಿಲ್ಲ.

ಈ) ಮಂಜೂರು ಮಾಡಲಾಗಿದೆ.

ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ಕೊರತೆ

945 (814) ಶ್ರೀ ತುಕಾರಾಮ್ ಇ. (ಸಂಡೂರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ಪಟ್ಟಣದಲ್ಲಿರುವ 100 ಹಾಸಿಗೆಗಳ ಆಸ್ಪತ್ರೆಯಲ್ಲಿ ಮತ್ತು ತಾಲ್ಲೂಕಿನ ಹಲವಾರು ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಮತ್ತು ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇದುವರೆವಿಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರಗಳನ್ನು ಒದಗಿಸುವುದು)?